ಶ್ರೀ ಡಿ. ಎಸ್. ನಾಡಕರ್ಣಿ.—ನನ್ನ ಪ್ರಶ್ನೆಯಲ್ಲಿ ಎರಡೂವರೆ ಲಕ್ಷ ಎಕರೆ ಜಮೀನಿನ ಪೈಕಿ 16 ಸಾವಿರ ಎಕರೆಯಲ್ಲಿ ಮಾತ್ರ ಬತ್ತವನ್ನು ಬೆಳೆಯಲಾಗುತ್ತದೆ. ಅದೂ ಕೂಡ ನಂಪೂರ್ಣವಾಗಿ ಮಳೆಯನ್ನು ಅವಲಂಬಿಸಿಕೊಂಡಿದೆ ಎಂದು ಹೇಳಿದೆ. ಅಲ್ಲಿ 60 ಸಾವಿರ ಜನರು ಬೇಸಾಯವನ್ನು ಅವಲಂಬಿಸಿಕೊಂಡಿದ್ದರೂ ಅಲ್ಲಿ ನೀರಾವರಿ ಕೆಲಸಕಾರ್ಯಗಳನ್ನು ಏಕೆ ಕೈಗೊಂಡಿಲ್ಲ ? ಜವಾಬು ಕೊಟ್ಟಿದ್ದು ಸರಿಯೇ ?

† ಶ್ರೀಮತಿ ಬನವರಾಜೇಶ್ವರಿ.—ಜವಾಬು ಕೊಟ್ಟಿದ್ದು ಸರಿಯಾಗಿದೆ. ಈ ಜಾಗವನ್ನು ಬೇರೆ ಕಡೆಗೆ ಹೋಲಿಸಿದರೆ ಅಲ್ಲಿ ಮಳೆ ಬರುವುದರಿಂದ ಆಷ್ಟೇನೂ ತೊಂದರೆಯಾಗುವುದಿಲ್ಲ. ಅಲ್ಲಿ ಈಗಾಗಲೇ 17 ಮೈನರ್ ಕೆಲಸಗಳನ್ನು ಕಾರ್ಯಗತಮಾಡಿದೆ. 50 ಕೆಲಸಗಳನ್ನು ತಾಲ್ಲೂಕು ಅಭಿವೃದ್ಧಿ ಮಂಡಲಗೆ ಒಳಪಡಿಸಿದೆ. ಅವರು ಕ್ಷೇತ್ರವನ್ನು ಹೆಚ್ಚು ಮಾಡಬೇಕೆಂದು ಮೆಮೊರ್ಯಾಂಡಂ ಕೊಟ್ಟಿದ್ದಾರೆ, ಅದು ಪರಿಶೀಲನೆಯಲ್ಲಿದೆ.

ಶ್ರೀ ಡಿ. ಎಸ್. ನಾಡಕರ್ಣಿ.—ಕಾರ್‌ರ್‌ಯ್ಯಾಂಡ್ ಸ್ಕೀಂ ಅಂದರೆ, ಉಪ್ಪು ನೀರಿನಿಂದ ಬತ್ತದ ಬೆಳೆಗೆ ರಕ್ಷಣೆ ಕೊಡುವ ಸ್ಕೀಂ. ನಿಮ್ಮ 50 ಕೆಲಸ ಅಂದರೆ, ಅದು 200 ಎಕರೆಗೂ ಸಾಕಾಗುವುದಿಲ್ಲ. ನಮ್ಮಲ್ಲಿ ಇದರ ಅವಶ್ಯಕತೆ ಹೆಚ್ಚು ಇದೆ. ಆದ್ದರಿಂದ ಇದನ್ನು ಹೆಚ್ಚು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀಮತಿ ಬನವರಾಜೇಶ್ವರಿ.—ಅದನ್ನು ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಯಾವ ಹಂತದಲ್ಲಿದೆ ಎಂಬುದನ್ನು ಈಗಾಗಲೇ ಹೇಳಿದ್ದೇವೆ.

ಶ್ರೀ ಡಿ. ಎಸ್. ನಾಡಕರ್ಣಿ.—6-7 ಸ್ಕೀಂ ಫೀಸಿಬಲ್ ಇಲ್ಲ ಎಂದು ಹೇಳಿದ್ದೀರಿ, ಈ ಮಾಹಿತಿ ನಿಮಗೆ ಕೊಟ್ಟವರು ಯಾರು ?

ಶ್ರೀಮತಿ ಬನವರಾಜೇಶ್ವರಿ.—ನಮ್ಮ ವರದಿ ಪ್ರಕಾರ 6-7 ಫೀಸಿಬಲ್ ಇಲ್ಲವೆಂದು ವರದಿ ಬಂದಿದೆ.

ಶ್ರೀ ಡಿ. ಎಸ್. ನಾಡಕರ್ಣಿ.—ಅಲ್ಲಿ ಎರಡನೆಯ ಬೆಳೆಯ ಅವಶ್ಯಕತೆ ಇದೆ. ಇದನ್ನು ತಿಳಿದು ಕೊಂಡು ಈಗಲಾದರೂ ಅದರ ಕೆಲಸ ಮಾಡಿಸುತ್ತೀರಾ ?

ಶ್ರೀಮತಿ ಬನವರಾಜೇಶ್ವರಿ.—ಈಗಾಗಲೇ ಕೆಲವು ಕೆಲಸಗಳಿಗೆ ಟೆಂಡರ್ ಕಾರ್ ಫಾರ್ ಮಾಡಿದೆ. ಮತ್ತು 10ನೇ ಸ್ಕೀಂಗೆ ಕೋರ್ಲಗಡ್ಡಿಯಲ್ಲನ (ಮೇರ್ಲಾಗದ) ಬಾಂದಾರ ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸಲಾಗುತ್ತದೆ. 6-1 1970ಕ್ಕೆ ಈ ಬಾಂದಾರ ಕೆಲಸ ತೆಗೆದುಕೊಳ್ಳಬೇಕೆಂದು ಇತ್ಯರ್ಥ ಮಾಡಿದೆ. ಇನ್ನೊಂದು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇವೆ. ಎಲ್ಲೆಲ್ಲ ಅಗತ್ಯ ಎಂದು ಕಾಣುತ್ತದೆ, ಅವುಗಳನ್ನು ಪರಿಶೀಲನೆ ಮಾಡಿ ಕಾರ್ಯಗತ ಮಾಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಇಲ್ಲಿ ಎರಡು ಲಕ್ಷ 27 ಸಾವಿರ ಎಕರೆ ಜಮೀನಿನಲ್ಲಿ ಕೇವಲ 16ಸಾವಿರ ನೀರಾವರಿ ಮಾಡಿ, ಬತ್ತ ಮತ್ತು ಆಹಾರಧಾನ್ಯ ಬೆಳೆಯುತ್ತಿದ್ದಾರೆ, ಅದರೆ ಉಳಿದ ಜಮೀನಿನಲ್ಲಿ ಆಹಾರಧಾನ್ಯ ಬೆಳೆಯುವುದಕ್ಕೆ ತಡೆಯಾಗಿದೆ. ಆದ್ದರಿಂದ ಆಹಾರ ಹೆಚ್ಚು ಬೆಳೆಯಬೇಕೆಂದು ಹೇಳುವಾಗ ಇಲ್ಲಿಯೂ ಹೆಚ್ಚು ಬೆಳೆಯುವುದಕ್ಕೆ ಏನು ಏರ್ಪಾಡು ಮಾಡುತ್ತೀರಿ ?

ಶ್ರೀಮತಿ ಬನವರಾಜೇಶ್ವರಿ.—ಉತ್ತರ ಸ್ಪಷ್ಟವಾಗಿ ಕೊಟ್ಟಿದ್ದೇವೆ. ಏನು ಫೀಸಿಬಲ್ ಇದೆ, ಅವುಗಳನ್ನು ಕಾರ್ಯಗತಮಾಡಬೇಕೆಂದು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ.

Audit of aided private schools in Bangalore District

27. Sri C. R. RANGE GOWDA (Magadi).—

Will the Minister for Education be pleased to state :—

(*a*) the number of private aided High Schools in B-
District (Taluk-wise) ;

(SRI C. R. RANGE GOWDA)

(*b*) the strength of the pupils and the teachers in each one of these schools;

(*c*) whether accounts of these schools have been audited; if so, the result in respect of each one of these schools;

(*d*) the percentage of passes in the S.S.L.C. Examination in each School?

SRI N. M. KOTRABASAIAH SOGI (Deputy Minister for Education).—

(*a*) *Name of the Taluk* — *No. of High Schools Private*

1.	Bangalore South	8
2.	Bangalore North	8
3.	Anekal	6
4.	Kanakapura	10
5.	Hoskote	2
6.	Channapatna	5
7.	Doddaballapura	2
8.	Devanahalli	3
9.	Magadi	8
10.	Ramanagaram	5
11.	Nelamangala	6
	Total	63

(*b*) Total Number of Pupils — 12,901

Total Number of Teachers — 537+7 part time.

Details *vide* Statement 'A' placed on the Table of the House.

(*c*) (i) The accounts of 6 schools have been audited for the year 1969-70 and grants have been finalised for the same year.

(ii) The accounts of 45 schools have been audited for the year 1968-69 and grants for that year have been finalised, except in the case of one school, which is under scrutiny.

(iii) The account of 8 schools have not yet been audited, nor have any grants been paid.

(iv) The accounts of one school have been audited for the year 1965-66 only.

(v) The remaining 3 schools are newly started and have not yet claimed any grant (*vide* Statement 'A' placed on the Table of the House).*

(*d*) *Vide* Statement 'A' placed on the Table of the House.*

*Copy placed in the Mysore Legislature Library *vide* No. 5; dated 25-9-197

ಶ್ರೀ ಸಿ. ಆರ್. ರಂಗೇಗೌಡ.—ಇಲ್ಲಿ 63 ಸಹಾಯಧನ ಪೋಷಿತ ಖಾನಗಿ ಪ್ರಾಥಶಾಲೆ ಗಳಿವೆ ಎಂದು ಹೇಳಿದ್ದೀರಿ. ಉಪಾಧ್ಯಾಯರುಗಳ ಸಂಖ್ಯೆ 537+7. ಪ್ರತಿ ವರ್ಷ ಹೊಸ ಹೊಸ ಉಪಾಧ್ಯಾಯರುಗಳನ್ನು ನೇಮಕ ಮಾಡುವುದರಿಂದ, ಟ್ರೈನಿಂಗ್ ಇಲ್ಲದ ಟೀಚರ್ಸ್ ಟೀಚ್ ಮಾಡು ವುದರಿಂದ, ವಿದ್ಯಾರ್ಥಿಗಳ ಸ್ಟಾಂಡರ್ಡ್ ಕಡಿಮೆಯಾಗುವುದಕ್ಕೆ ಕಾರಣವಲ್ಲವೇ, ಮತ್ತು ಇದರಿಂದ ಹೆಚ್ಚು ಜನರು ಫೈಲು ಆಗುವುದಕ್ಕೆ ಕಾರಣವಲ್ಲವೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಹಾಗೇನೂ ಇಲ್ಲ. ಸಾಧ್ಯವಾದಷ್ಟು ಎಲ್ಲಾ ಶಾಲೆಗಳಿಗೆ ಟ್ರೈನ್ಡ್ ಟೀಚರ್ಸ್‌ನ್ನು ಕೊಟ್ಟಿದೆ. ಅಕಸ್ಮಾತ್ ಅನ್‌ಟ್ರೈನ್ಡ್ ಇದ್ದರೆ, ಅವರನ್ನು ಟ್ರೈನಿಂಗ್‌ಗೆ ಕಳಿಸಿ, ಡೆಪ್ಯೂಟೇಷನ್‌ಮೇಲೆ ಬೇರೆ ಟೀಚರುಗಳನ್ನ ನೇಮಕ ಮಾಡುತ್ತೇವೆ. ಯಾವುದೇ ನ್ಯೂನತೆಯಲ್ಲಿ ಶಿಕ್ಷಣವಿಲ್ಲದೆ, ಕೊರತೆಯಾಗಿದೆ ಎಂದು ಮನವರಿಕೆಯಾಗಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ತಾಲ್ಲೂಕು ಬೋರ್ಡುಗಳು ನಡೆಸುತ್ತಿರುವ ಶಾಲೆಗಳಲ್ಲಿ ಎಸ್ ಎಸ್.ಎಲ್.ಸಿ. ಫಲಿತಾಂಶ ಬಹಳ ಕಡಿಮೆಯಾಗಿದೆ. ಅಲ್ಲಿಯ ಉಪಾಧ್ಯಾಯರುಗಳಿಗೆ ಸರ್ಕಾರವೇ ಸಂಬಳಗಳನ್ನು ಕೊಡುವುದರಿಂದ, ಅವುಗಳನ್ನು ಸರ್ಕಾರವೇ ತೆಗೆದುಕೊಂಡು ಸರಿಯಾಗಿ ನಡೆಸುವುದು ಒಳ್ಳೆಯದಲ್ಲವೇ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.— ಅದು ಮಾನ್ಯ ಸದಸ್ಯರ ಸಲಹೆ. ಆದರೆ ಅದನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲನೆ ಮಾಡುತ್ತದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈಗ ಖಾಸಗಿ ಶಾಲೆಗಳಲ್ಲಿ ಹುಡುಗರಿಂದ ಫೀಸ್ ವಸೂಲು ಮಾಡುವುದಕ್ಕೆ ಏನಾದರೂ ನಿಯಮ ಇದೆಯೇ ? ಅದಕ್ಕೆ ವಿರುದ್ಧವಾಗಿ ಫೀಸ್ ವಸೂಲು ಮಾಡಿದ್ದು ಸರ್ಕಾರದ ಗಮನಕ್ಕೆ ಏನಾದರೂ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಇದು ಬೇರೆ ಪ್ರಶ್ನೆಯಾಗಿದೆ. ಆದರೆ ಅದಕ್ಕೆ ಸಂಬಂಧಪಟ್ಟಂತೆ ಒಂದು ನಿಯಮ ಇದೆ.

ಶ್ರೀ ಸಿ. ಆರ್. ರಂಗೇಗೌಡ.—ಈಗಾಗಲೇ ಸರ್ಕಾರದವರು ಲೋಕಲ್‌ಬೋರ್ಡ್ಸ್‌ನ ಹೈಸ್ಕೂಲು ಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಒಂದು ಆದೇಶವನ್ನು ಕೊಟ್ಟು ಆ ಬಗ್ಗೆ ಸಂಬಂಧಪಟ್ಟ ಸ್ಕೂಲುಗಳವರು ಅವರ ಅಭಿಪ್ರಾಯವನ್ನು ಕೊಡಬೇಕು ಎಂದು ಕೇಳಿದ್ದಾರೆ. ಆದ್ದರಿಂದ ಏಯ್ಡೆಡ್ ಸ್ಕೂಲುಗಳನ್ನು ಸರ್ಕಾರದವರು ವಹಿಸಿಕೊಳ್ಳುವುದಕ್ಕೆ ಕಾನೂನಿನ ಪರಿಮಿತಿಯೊಳಗೆ ಇಲ್ಲದಿದ್ದರೆ ಆ ಸ್ಕೂಲುಗಳಿಗೆ ಉಪಾಧ್ಯಾಯರನ್ನು ಸರ್ಕಾರದ ಮೂಲಕ ನೇಮಕ ಮಾಡುವಂತಹ ವ್ಯವಸ್ಥೆ ಯನ್ನು ಮಾಡಿ ಸೆಕ್ಯುರಿಟಿ ಆಫ್ ಸರ್ವಿಸ್ ಕೊಟ್ಟು ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಖಾಸಗೀ ಶಾಲೆಗಳನ್ನು ಸರ್ಕಾರದವರು ತೆಗೆದು ಕೊಂಡು ಅವುಗಳನ್ನು ನಡೆಸುವಂಥಾದ್ದು ಸರ್ಕಾರದ ನೀತಿ ಇಲ್ಲ. ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿರತಕ್ಕ ಹೈಸ್ಕೂಲುಗಳನ್ನು ಸರ್ಕಾರ ಮೊದಲು ತೆಗೆದುಕೊಳ್ಳಬೇಕೆಂಬ ಉದ್ದೇಶ ಇದೆ. ಅದಕ್ಕಾಗಿ ಸ್ಥಳೀಯ ಸಂಸ್ಥೆಗಳ ಅಭಿಪ್ರಾಯವನ್ನು ಕೇಳಲಾಗಿದೆ. ಯಾರು ಭೇಷರತ್ತಾಗಿ ಒಪ್ಪಿಗೆಯನ್ನು ಕೊಟ್ಟಿದ್ದಾರೆ ಅದನ್ನು ಸರ್ಕಾರ ವಹಿಸಿಕೊಳ್ಳುವುದು. ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಆರ್. ಮುನಿಸ್ವಾಮಯ್ಯ. ಖಾಸಗೀ ಶಾಲೆಗಳನ್ನು ಡೈರೆಕ್ಟರು, ಜಾಯಿಂಟ್ ಡೈರೆಕ್ಟರು, ಡೆಪ್ಯುಟಿ ಡೈರೆಕ್ಟರು, ಡೈರೆಕ್ಟರು ಅಥವಾ ಡಿ.ಇ.ಓ. ಯಾರಾದರೂ ವರ್ಷಕ್ಕೆ ಒಂದು ಸಲ ಇನ್‌ಸ್ಪೆಕ್ಷನ್ ಮಾಡದೆ ಇರತಕ್ಕಂಥ ನಿನ್ನೆವೇಶ ಇರುವುದರಿಂದ ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ಗಳು ಸಾಕಷ್ಟು ಸರಿಯಾದ ರೀತಿಯಲ್ಲಿ ನಡೆಯುತ್ತಾ ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇನ್‌ಸ್ಪೆಕ್ಷನ್ ಅನ್ನು ಸರಿಯಾಗಿ ವರ್ಷಕ್ಕೆ ವರ್ಷಕ್ಕೆ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು ಈಗ ಶಿಕ್ಷಣ ಖಾತೆಯಲ್ಲಿ ಇನ್‌ಸ್ಪೆಕ್ಟರ್ಸ್‌ಗೆ ಸಂಬಂಧಪಟ್ಟ ಹಾಗೆ ಮಹತ್ತರ ಬದಲಾವಣೆಗಳು ಆಗಿವೆ. ಇನ್‌ಸ್ಪೆಕ್ಷನ್ ಅನ್ನು ಹೆಚ್ಚು ಬಲಪಡಿಸ ಲಾಗಿದೆ. ಆದ್ದರಿಂದ ಅದು ಮೊದಲಿಗಿಂತಲೂ ಈಗ ಹೆಚ್ಚು ತೀವ್ರಗತಿಯಲ್ಲಿ ನಡೆಯುತ್ತಿದೆ.

ಶ್ರೀ ಬಿ. ಪಿ. ಗಂಗಾಧರ.—ಏಡೆಡ್ ಸ್ಕೂರ್ನ್ ಮತ್ತು ಲೋಕಲ್ ಬೋರ್ಡ್ ಸ್ಕೂಲುಗಳಲ್ಲಿ ಕೆಲಸಮಾಡತಕ್ಕ ಉಪಾಧ್ಯಾಯರುಗಳು ಮತ್ತು ಪಾರ್ಟ್‌ಟೈಮ್ ಉಪಾಧ್ಯಾಯರುಗಳು ರಾಜ ಕಾರಣಿಗಳಾಗಿ ಕೆಲಸ ಮಾಡತಕ್ಕದ್ದು ತಮಗೆ ಗೊತ್ತಿದೆಯೇ ? ಮತ್ತು ಕೆಲವರು ಪಾರ್ಟ್ ಟೈಮ್ ಟೀಚರ್ ಆಗಿ ಅಲ್ಲಿ ಕೆಲಸ ಮಾಡುತ್ತಿರುವುದರಿಂದ ಅಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಒಳ್ಳೆಯ ರೀತಿಯ

(ಶ್ರೀ ಬಿ. ಪಿ. ಗಂಗಾಧರ್)

ಬೋಧನೆಯನ್ನು ಮಾಡುವುದಕ್ಕೆ ಆಗದೆ ಅವರ ಕಾಲವನ್ನೆಲ್ಲಾ ರಾಜಕೀಯಕ್ಕಾಗಿ ವಿನಿಯೋಗ ಮಾಡುತ್ತಿರುವುದು ತಮಗೆ ಗೊತ್ತಿದೆಯೇ? ಮತ್ತು ಆ ಬಗ್ಗೆ ಸರ್ಕಾರದವರು ಒಂದು ಕಾನೂನು ಮಾಡಿ ಪಾಲಿಟಿಕ್ಸ್‌ನಲ್ಲಿರತಕ್ಕವರನ್ನು ಯಾರನ್ನೂ ಅಧ್ಯಾಪಕರನ್ನಾಗಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಆರ್ಡರ್ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥಾ ನಿರ್ದಿಷ್ಟವಾದ ಕೇಸುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅವರ ಮೇಲೆ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಶಿಕ್ಷಕರು ರಾಜಕೀಯದಲ್ಲಿ ಭಾಗವಹಿಸಕೂಡದು ಎನ್ನುವುದು ಸರ್ಕಾರದ ಸರ್ವೇ ಸಾಮಾನ್ಯವಾದ ತತ್ವವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—(ಸಿ) ಪ್ರಶ್ನೆಗೆ ಉತ್ತರವಾಗಿ ಒಂದು ಶಾಲೆಯು 1965-66ನೇ ಸಾಲಿನ ಲೆಕ್ಕವನ್ನು ಮಾತ್ರ ತನಿಖೆ ಮಾಡಲಾಗಿದೆ ಎಂದು ಹೇಳಿದೀರಿ. ಬಹಳ ಶಾಲೆಗಳಲ್ಲಿ ಆಡಿಟ್ ಆಗಿಲ್ಲವೇ, ಇದರಲ್ಲಿ ತಮ್ಮ ಕೈವಾಡವೇನಾದರೂ ಇದೆಯೇ, ತಮಗೆ ಬೇಕಾದಂತಹ ಶಾಲೆಗಳಿಗೆ 1965-66ನೇ ಸಾಲಿನ ಆಡಿಟ್ ಮಾಡದ ಹಾಗೆ ಏನಾದರೂ ಹೇಳಿದ್ದಿರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆಡಿಟ್ ಮಾಡಿಸತಕ್ಕ ಜವಾಬ್ದಾರಿ ಅಯಾ ಖಾಸಗೀ ಸಂಸ್ಥೆಗಳಿಗೆ ಬಿಟ್ಟದ್ದು. ಆಡಿಟ್ ಮಾಡಿಸಿದ ನಂತರ ಗ್ರಾಂಟ್ ಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ.

ಶ್ರೀ ವಿ. ಎಲ್. ಶಿವಪ್ಪ.—ಖಾಸಗೀ ಸಂಸ್ಥೆಗಳಲ್ಲಿ ಉಪಾಧ್ಯಾಯರನ್ನು ನೇಮಕ ಮಾಡುವಾಗ ಕೆಲಸಕ್ಕೆ ಬಾರದ ಮತ್ತು ವಯಸ್ಸಾಗಿರತಕ್ಕವರನ್ನು ಕೆಲಸಕ್ಕೆ ಸೇರಿಸಿಕೊಂಡಿರುವುದರಿಂದ ಅಲ್ಲಿ ವಿದ್ಯಾರ್ಥಿಗಳು ಹೆಚ್ಚು ಸಂಖ್ಯೆಯಲ್ಲಿ ಪಾಸಾಗುತ್ತಿಲ್ಲ, ಆದ್ದರಿಂದ ಖಾಸಗೀ ಸಂಸ್ಥೆಗಳಿಗೆ ಸ್ಪರ್ಧಾತ್ಮಕ ರಿಸ್ಟ್ರಿಕ್ಷನ್ ಹಾಕಿ ಸರಿಯಾದ ರೀತಿಯಲ್ಲಿ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವಂತೆ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ.—ಅಂಥಾದ್ದು ಯಾವುದು ನಿರ್ದಿಷ್ಟವಾಗಿ ಸರ್ಕಾರದ ಗಮನಕ್ಕೆ ಬಂದಿಲ್ಲ. ಬಂದರೆ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಖಾಸಗಿ ಸ್ಕೂಲುಗಳಲ್ಲಿ ಶಿಕ್ಷಕರನ್ನು ನೇಮಿಸಿಕೊಳ್ಳಬೇಕಾದರೆ ಕೆಲವು ನಿಯಮಗಳು ಇವೆ. ಆ ನಿಯಮಗಳನ್ನು ಅನುಸರಿಸಿ ಕ್ವಾಲಿಫಿಕೇಷನ್, ಅರ್ಹತೆ ಇವುಗಳನ್ನೆಲ್ಲಾ ನೋಡಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ಅದಕ್ಕೆ ಎಜುಕೇಷನ್ ಡಿಪಾರ್ಟ್‌ಮೆಂಟಿನವರು ಅಪ್ರೂವರ್ ಕೊಟ್ಟ ಶಾಲೆಗಳಿಗೆ ಮಾತ್ರ ನಾವು ಗ್ರಾಂಟ್ ಕೊಡುತ್ತೇವೆ.

ಶ್ರೀ ಪಾಟಾಳ್ ನಾಗರಾಜ್.—ಖಾಸಗಿ ಶಾಲೆಗಳವರು ಲೆಕ್ಕಪತ್ರಗಳನ್ನು ಇಡುವಾಗ ಮೂರು ತರಹ ಅಕೌಂಟ್ಸ್ ಇಟ್ಟಿದ್ದಾರೆ. ಒಂದು ಸ್ವಂತ ಅಕೌಂಟ್, ಎರಡನೆಯದು ಪೋಷಕರ ಅಕೌಂಟ್, ಮೂರನೆಯದು ಸರ್ಕಾರಕ್ಕೆ ತೋರಿಸತಕ್ಕದ್ದು, ಈ ಲೆಕ್ಕಪತ್ರಗಳಲ್ಲಿ ಆಡಿಟರ್ ಯಾವ ಅಕೌಂಟ್ ನೋಡುತ್ತಾರೆ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥಾ ನಿರ್ದಿಷ್ಟವಾದ ಆರೋಪಣೆಗಳನ್ನು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

Taking over of Marathi Primary Schools in Belgaum City

38. Sri B. B. SAYANAK (Belgaum).—

Will the Minister for Education be pleased to state:—

(*a*) the number of Marathi Primary Schools in Belgaum City taken over by the Government ;

(*b*) whether the Shahaji Vidya Mandir, a Primary Marathi School had been taken over on 30th March 1970 ;